ರಾಬರ್ಟ್‌ಸನ್ ಪೇಟೆ ನಗರ ಸಭೆಯ ರಸ್ತೆಗಳ ರಿಪೇರಿ

ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್).— ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭–೮೮ನೇ ಸಾಲಿನಲ್ಲಿ ರಾಬರ್ಟ್‌ಸನ್‌ಪೇಟೆ ನಗರ ಸಭೆಗೆ ಸರ್ಕಾರವು ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಇದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಆ) ರಾಬರ್ಟ್‌ಸನ್ ಪೇಟೆ ನಗರ ಸಭೆಯು ಹಿಂದಿನ ೫ ವರ್ಷಗಳಿಂದಲೂ ರಸ್ತೆಗಳನ್ನು ದುರಸ್ತಿ ಮಾಡಿರುವುದಿಲ್ಲ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಈ ದಿಶೆಯಲ್ಲಿ ಸರ್ಕಾರವು ತೆಗೆದುಕೊಂಡಿರುವ ಕ್ರಮ.

ಇ) ೧೯೮೮–೮೯ನೇ ಸಾಲಿಗೆ ರಾಬರ್ಟ್‌ಸನ್ ಪೇಟೆ ನಗರ ಸಭೆಗೆ ಮಂಜೂರಾಗಿರುವ ಅನುದಾನ ಎಷ್ಟು ? ಮತ್ತು ಇದನ್ನು ಯಾವಾಗ ಬಿಡುಗಡೆ ಮಾಡಲಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಇಲ್ಲ.

ಇ) ೧೯೮೮–೮೯ರ ಸಾಲಿನ ಇಲಾಖಾ ಬೇಡಿಕೆಗೆ ವಿಧಾನ ಮಂಡಲ ಅಂಗೀಕಾರ ನೀಡಿ ಧನ ವಿನಿಯೋಗ ಮಸೂದೆಯನ್ನು ಒಪ್ಪಿದ ನಂತರ.

SRI T. S. MANI—Will the government sanction the special grant considering the necessity of road repairs of the K.G.F. City?

ಶ್ರೀ ಎಂ. ಚಂದ್ರಶೇಖರ್.— ಮಾನ್ಯ ಅಧ್ಯಕ್ಷರೇ ಈ ವರ್ಷ ಹೊಸ ಅನುದಾನ ೩೨ ಕೋಟಿ ರೂಪಾಯಿಗಳಾಗಿರುವುದರಿಂದ ಅಷ್ಟು ವರ್ಷಗಳ ಅನುದಾನ ಬೇಡಿಕೆಗಳು ಇದರಲ್ಲಿ ಸೇರಿವೆ. ಈಗ ಇದರಲ್ಲಿ ಹೊಸದಾಗಿ ಪ್ರತ್ಯೇಕವಾಗಿ ಮಾಡುವುದಕ್ಕೆ ಆಗುವುದಿಲ್ಲ. ೧೯೮೮–೮೯ನೇ ಸಾಲಿನ ಅನುದಾನ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಈ ವರ್ಷದ ಇಕ್ಕಟ್ಟು ಪರಿಹಾರ ಧನ ಮತ್ತು ೧೯೮೭–೮೮ನೇ ಸಾಲಿನ ಇಕ್ಕಟ್ಟು ಪರಿಹಾರ ಧನ ಬಿಡುಗಡೆಯಲ್ಲಿ ಸ್ವಲ್ಪ ವಿಳಂಬವಾಯಿತು. ಹೋದ ವರ್ಷದ ಇಕ್ಕಟ್ಟು ಪರಿಹಾರ ಧನ ೧೨.೩೬.೫೦೬ ಬಿಡುಗಡೆ ಮಾಡಿದ್ದೇವೆ.

ಉಡುಪಿ ಪುರಸಭೆಯಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗ

೨೨೫೧. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ) –ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಉಡುಪಿ ಪುರಸಭೆಯಲ್ಲಿ ೫ ವರ್ಷಗಳಿಂದಲೂ ಕೆಲಸ ಮಾಡುತ್ತಿರುವ ಸಿಬ್ಬಂದಿಯವರಿಂದ ಉಡುಪಿಯ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ೫ ವರ್ಷಗಳಿಂದಲೂ ಮುಂದುವರೆಯುತ್ತಿರುವ ಸಿಬ್ಬಂದಿ ವರ್ಗದವರನ್ನು ವರ್ಗಾವಣೆ ಮಾಡುವ ವಿಷಯದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಶ್ರೀಮತಿ ಮನೋರಮಾ ಮಧ್ವರಾಜ್,—ಸನ್ಮಾನ್ಯ ಉಪಾಧ್ಯಕ್ಷರೇ ನಾನು ಈ ವಿಚಾರವನ್ನು ತಿಳಿದೇ ಈ ಪ್ರಶ್ನೆಯನ್ನು ಹಾಕಿದ್ದೇನೆ. ನಮ್ಮ ಉಡುಪಿ ಮುನಿಸಿಪಾಲಿಟಿ ಬಿಲ್ಡಿಂಗ್ ಇನ್ಸ್‌ಪೆಕ್ಟರ್